ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY
ಜ್ಞಾನಜ್ಯೋತಿ ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
Ph.No.080-22961016 / 22131385 E-Mail ID: registrar@bcu.ac.in

ಸಂಖ್ಯೆ: ಬೆಂ.ನ.ವಿ./ಸಿಬ್ಬಂದಿ/ಅ.ಉ.ನೇ/2025-26 182 ದಿನಾಂಕ: 05.07.2025

**ಅಧಿಸೂಚನೆ**

ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಹಾಗೂ ವಿಶ್ವವಿದ್ಯಾನಿಲಯದ ಮಹಿಳಾ ಕಾಲೇಜು, ಮಲ್ಲೇಶ್ವರಂನಲ್ಲಿ 2025–26ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಪ್ರತಿ ಸ್ನಾತಕ / ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಲಭ್ಯವಿರುವ ಬೋಧನಾ ಕಾರ್ಯದ ನಿರ್ವಹಣೆಗಾಗಿ ಅತಿಥಿ ಉಪನ್ಯಾಸಕರ ಸೇವೆಯನ್ನು ಪಡೆಯಲು ಯು.ಜಿ.ಸಿ/ಎಐಸಿಟಿಇ ನಿಯಮಾನುಸಾರ ಅರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ವಿಜ್ಞಾನ ವಿಷಯಗಳು :** 1. ರಸಾಯನಶಾಸ್ತ್ರ 2. ಜೀವರಸಾಯನಶಾಸ್ತ್ರ 3. ಸಸ್ಯವಿಜ್ಞಾನ 4. ಪ್ರಾಣಿವಿಜ್ಞಾನ 5. ಗಣಿತಶಾಸ್ತ್ರ 6. ಭೌತಶಾಸ್ತ್ರ 7. ಉಡುಪು ಮತ್ತು ತಂತ್ರಜ್ಞಾನ (UG & PG) 8. ಪರಿಸರ ವಿಜ್ಞಾನ 9. ಗಣಕ ವಿಜ್ಞಾನ – ಎಂ.ಎಸ್ಸಿ ಗಣಕ ವಿಜ್ಞಾನ, ಬಿಸಿಎ, ಬಿಸಿಎ– Artificial Intelligence and Machine Learning and ಬಿಸಿಎ – Data Science

**ಕಲಾ ವಿಷಯಗಳು:** 1. ಕನ್ನಡ 2. ಇಂಗ್ಲೀಷ್ 3. ಅರ್ಥಶಾಸ್ತ್ರ 4. ಇತಿಹಾಸ 5. ರಾಜ್ಯಶಾಸ್ತ್ರ 6. ಸಮಾಜಶಾಸ್ತ್ರ 7. ಸಮಾಜಕಾರ್ಯ 8. ಸಂವಹನ ಮತ್ತು ಪತ್ರಿಕೋದ್ಯಮ 9. ಜಾಗತಿಕ ಭಾಷೆಗಳು, (ಜರ್ಮನ್, ಫ್ರೆಂಚ್, ಸ್ಪ್ಯಾನಿಷ್, ಜಪಾನೀಸ್, ಕೊರಿಯನ್, ಚೈನೀಸ್, ರಷ್ಯನ್, ಇಟಾಲಿಯನ್) 10. ಹಿಂದಿ

**ವಾಣಿಜ್ಯ ವಿಷಯಗಳು:** ಎಂ.ಕಾಂ., ಎಂ.ಕಾಂ.(ಫೈನಾನ್ಸ್ ಮತ್ತು ಅಕೌಂಟಿಂಗ್), ಎಂ.ಕಾಂ (ಇಂಟರ್‌ನ್ಯಾಷನಲ್ ಬಿಸಿನೆಸ್), ಬಿ.ಕಾಂ, ಬಿ.ಕಾಂ(Accounting & Finance), ಬಿ.ಕಾಂ (Financial Technology)

**ಮ್ಯಾನೇಜ್‌ಮೆಂಟ್:** ಬಿಬಿಎ, ಬಿಬಿಎ (Business Analytics) , ಎಂ.ಬಿ.ಎ. (ಡೇ ಮತ್ತು ಸಂಜೆ),

**ಅವಶ್ಯಕತೆಗೆ ಅನುಗುಣವಾಗಿ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡುವ ಅಧಿಕಾರವನ್ನು ವಿಶ್ವವಿದ್ಯಾನಿಲಯ ಕಾಯ್ದಿರಿಸಿದೆ.**

ಅರ್ಜಿಗಳನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ **www.bcu.ac.in** ನಲ್ಲಿ ತೋರಿಸಿರುವ **bcugfportal.in** ಲಿಂಕ್ ನ ಮೂಲಕ ದಿನಾಂಕ: 07.07.2025ರಂದ ಬೆಳಿಗ್ಗೆ 10.00 ಗಂಟೆಯಿಂದ 28.07.2025ರ ಸಂಜೆ 5.00 ಗಂಟೆಯೊಳಗೆ ಸಲ್ಲಿಸಬಹುದಾಗಿದೆ. ನಿರ್ವಹಣಾ ಶುಲ್ಕ ರೂ. 200/– (SC/ST/CAT-1 Rs.100/-)ಗಳನ್ನು ಆನ್‌ಲೈನ್ ಮೂಲಕ ಈ ಕೆಳಕಂಡ ಬ್ಯಾಂಕ್ ಖಾತೆಗೆ ಪಾವತಿಸಕ್ಕದ್ದು, ಹೆಚ್ಚಿನ ಮಾಹಿತಿಗಳಿಗಾಗಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ **www.bcu.ac.in** ನೋಡಬಹುದು.

Bank Name: Bank of Baroda
Account No: 05190100016143
IFSC Code: BARB0BANGAL (5th letter is Zero)

ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಯ ಒಂದು ಭೌತಿಕ ಪ್ರತಿಯನ್ನು ದಿನಾಂಕ: 31.07.2025 ರೊಳಗೆ ಕುಲಸಚಿವರ ಕಛೇರಿ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಜ್ಞಾನಜ್ಯೋತಿ ಸೆಂಟ್ರಲ್ ಕಾಲೇಜ್ ಆವರಣ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು – 560 001ರಲ್ಲಿ ಸಲ್ಲಿಸತಕ್ಕದ್ದು.

ಮು.ತಿ.ನೋ...

ಸೂಚನೆ:

1. ಯು.ಜಿ.ಸಿ ನಿಯಮಾವಳಿ 2018 ತಿದ್ದುಪಡಿ ಅಧಿಸೂಚನೆ ದಿನಾಂಕ: 30.06.2023ರ ಪ್ರಕಾರ ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರಾಗಿ ನೇಮಕಾತಿ ಹೊಂದಲು NET/SLET/SET ಅರ್ಹತೆಯನ್ನು ಹೊಂದಿರಬೇಕು.
2. ಯಾವ Discipline ನಲ್ಲಿ NET/SLET/SET ಪರೀಕ್ಷೆಗಳನ್ನು ನಡೆಸುವುದಿಲ್ಲವೋ ಅಂತಹ Discipline ನಲ್ಲಿ NET/SLET/SET ನ ಅಗತ್ಯವಿರುವುದಿಲ್ಲ.
3. ಈ ಹುದ್ದೆಗಳು ಸಂಪೂರ್ಣ ತಾತ್ಕಾಲಿಕವಾಗಿರುತ್ತದೆ.
4. ಈ ಅತಿಥಿ ಉಪನ್ಯಾಸಕರ ನೇಮಕಾತಿಯು ಖಾಯಂ ಉಪನ್ಯಾಸಕರ ನೇಮಕಾತಿ ಆಗುವವರೆಗೆ ಅಥವಾ 2025–26ನೇ ಶೈಕ್ಷಣಿಕ ಅವಧಿಯವರೆಗೆ ಇದರಲ್ಲಿ ಯಾವುದು ಮೊದಲೊ ಅಲ್ಲಿಯವರೆಗೆ ಅನ್ವಯಿಸುವುದು.
5. ಸಂದರ್ಶನಕ್ಕಾಗಿ ಅಹ್ವಾನಿಸಲಾಗುವ ಅಭ್ಯರ್ಥಿಗಳನ್ನು ಸಂದರ್ಶನದ ಭಾಗವಾಗಿ ಪ್ರಾತ್ಯಕ್ಷಿಕೆ (Demo Class) ನೀಡಬೇಕಾಗುತ್ತದೆ.
6. ಆಯ್ಕೆಯಾದ ಅಭ್ಯರ್ಥಿಗಳ ಸಂಭಾವನೆಯನ್ನು ವಿಶ್ವವಿದ್ಯಾನಿಲಯದ ನಿಯಾಮಾನುಸಾರ ಈ ಕೆಳಕಂಡಂತೆ ಪಾವತಿಸಲಾಗುವುದು.

| | |
|---|---|
| ಅ) **NET / SLET/ Ph.D** ಹೊಂದಿರುವ ಪೂರ್ಣಾವಧಿ ಅತಿಥಿ ಉಪನ್ಯಾಸಕರಿಗೆ (ವಾರಕ್ಕೆ 16 ಗರಿಷ್ಠ 64 ಗಂಟೆಗಳ) | ಪ್ರತಿ ಗಂಟೆಗೆ 780/-<br>ಗರಿಷ್ಠ ರೂ. 49,920/- |
| ಆ) **NET / SLET/ Ph.D** ಇಲ್ಲದಿರುವ (ವಾರಕ್ಕೆ 16 ಗರಿಷ್ಠ 64 ಗಂಟೆಗಳ) | ಪ್ರತಿ ಗಂಟೆಗೆ 680/-<br>ಗರಿಷ್ಠ ರೂ. 43,520/– |
| ಇ)ಉಳಿದ ಅರೆಕಾಲಿಕೆ ಅತಿಥಿ ಉಪನ್ಯಾಸಕರು:<br>**i) NET / SLET/ Ph.D** ಹೊಂದಿರುವ<br>**ii) NET / SLET/ Ph.D** ಇಲ್ಲದಿರುವವರಿಗೆ | ಪ್ರತಿ ಗಂಟೆಗೆ ರೂ. 780/-<br>ಪ್ರತಿ ಗಂಟೆಗೆ ರೂ. 680/- |
| ಈ) ವೃತ್ತಿಪರ ವಿದ್ವಾಂಸರು / ಉದ್ಯಮಗಳ ಪರಿಣಿತರು / ಶಿಕ್ಷಣ ತಜ್ಞರು ನೀಡುವ ಆಹ್ವಾನಿತ ಉಪನ್ಯಾಸಗಳಿಗೆ | ಪ್ರತಿ ಗಂಟೆಗೆ ರೂ. **2000/-** ಗರಿಷ್ಠ ವಾರಕ್ಕೆ 5 ಗಂಟೆಗಳು |

7. ಆಯ್ಕೆಯಾದ ಅಭ್ಯರ್ಥಿಗಳು ಸ್ನಾತಕ ಮತ್ತು ಸ್ನಾತಕೋತ್ತರ ವಿಷಯಗಳಲ್ಲಿ ಬೋಧನಾ ಕಾರ್ಯ ನಿರ್ವಹಿಸಲು ಬದ್ಧರಾಗಿರಬೇಕಾಗುತ್ತದೆ.
8. ಆಯ್ಕೆಯಾದ ಅಭ್ಯರ್ಥಿಗಳನ್ನು ವಿಶ್ವವಿದ್ಯಾನಿಲಯದ ಮಹಿಳಾ ಕಾಲೇಜು ಅಥವಾ ಸೆಂಟ್ರಲ್ ಕಾಲೇಜು ಆವರಣದಲ್ಲಿರುವ ಮೈನ್ ಕ್ಯಾಂಪಸ್‌ಗೆ ನಿಯೋಜಿಸುವ ಹಕ್ಕನ್ನು ವಿಶ್ವವಿದ್ಯಾನಿಲಯ ಹೊಂದಿರುತ್ತದೆ.
9. ವಿವಿಧ ವಿಷಯಗಳ ಕಾರ್ಯಭಾರ ಮತ್ತು ಅಗತ್ಯಕ್ಕೆ ಅನುಗುಣವಾಗಿ ಹಾಗೂ ಸದ್ಯದಲ್ಲಿ ಜಾರಿಯಲ್ಲಿರುವ ಸರ್ಕಾರದ ಮೀಸಲಾತಿ ನಿಯಮಗಳಿಗೆ ಅನುಗುಣವಾಗಿ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲಾಗುವುದು.
10. ಮಿಂಚಂಚೆ ಮೂಲಕ ಕಳುಹಿಸಿಕೊಡುವ ಅರ್ಜಿಗಳನ್ನು ಪರಿಗಣಿಸುವುದಿಲ್ಲ.
11. ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿರುವವರ ಭೌತಿಕ ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗುವುದು.
12. **ಕರ್ನಾಟಕ ರಾಜ್ಯದ SC/ST/OBC ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರು. ಅಭ್ಯರ್ಥಿಯು ಕರ್ನಾಟಕ ರಾಜ್ಯದ ಸಕ್ಷಮ ಪ್ರಾಧಿಕಾರದಿಂದ ಜಾತಿ ಪ್ರಮಾಣಪತ್ರಗಳನ್ನು ಸಲ್ಲಿಸಬೇಕು.**

**ಅಭ್ಯರ್ಥಿಗಳಿಗೆ ಸಂದರ್ಶನಕ್ಕೆ ಪ್ರತ್ಯೇಕ ಪತ್ರಗಳನ್ನು ಕಳುಹಿಸುವುದಿಲ್ಲ. ಸಂದರ್ಶನದ ದಿನಾಂಕ ಮತ್ತು ಇತರೆ ಮಾಹಿತಿಗಳಿಗೆ ಕಾಲಕಾಲಕ್ಕೆ ವಿಶ್ವವಿದ್ಯಾನಿಲಯದ ವೆಬ್‌ಸೈಟ್: (www.bcu.ac.in)ನ್ನು ಗಮನಿಸಬಹುದು. ಹೆಚ್ಚಿನ ಮಾಹಿತಿಗೆ ಮಿಂಚಂಚೆ ವಿಳಾಸ: registrar@bcu.ac.in ಮೂಲಕ ಸಂಪರ್ಕಿಸಬಹುದಾಗಿದೆ.**

**Help desk Number: 1. Sri Vivek R Venkatesh - 9480208270**
**2. Smt. T. Padmamma – 9980632642**

ಕುಲಸಚಿವರು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಆವರಣ